ಆ) ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟಕ್ಕೆ ಆದ ಖರ್ಚು ಮತ್ತು ಅದರಲ್ಲಿ ಭೂಸ್ವಾಧೀನ ಮತ್ತು ಪುನರ್‌ವಸತಿಗಳಿಗೆ ಆದ ಖರ್ಚುಗಳ ವಿವರಗಳು ಈ ರೀತಿ ಇವೆ.—

(ಲಕ್ಷ ರೂ.ಗಳಲ್ಲಿ)

| | ೧೯೮೦–೮೧ | ೧೯೮೧–೮೨ | ೧೯೮೨–೮೩ | ೧೯೮೩–೮೪ | ೧೯೮೪–೮೫ |
|---|---|---|---|---|---|
| ೧. ಯೋಜನೆಯಂ ಒಟ್ಟಿಗೆ ವೆಚ್ಚ. | ೪೦೧೯ | ೪೪೭೮ | ೪೦೮೪ | ೪೯೧೦ | ೪೧೩೫ |
| ೨. ಅದರಲ್ಲಿ ಭೂ ಸ್ವಾಧೀನ ಮತ್ತು ಪುನರ್‌ವಸತಿಗೆ ಆದ ವೆಚ್ಚ (ಬಾಗಲ ಕೋಟೆ ಪುನರ್‌ವಸತಿ ಸೇರಿ) | ೬೫೪.೧೨ | ೫೭೦.೩೦ | ೬೫೪.೮೦ | ೮೦೧.೩೩ | ೬೭೪.೮೬ |

| | ೧೯೮೫–೮೬ | ೧೯೮೬–೮೭ | ೧೯೮೭–೮೮ | ಒಟ್ಟಿಗೆ |
|---|---|---|---|---|
| | | | (ಡಿಸೆಂಬರ್ ೧೯೮೭ರ ವರೆಗೆ) | |
| ೧. | ೪೬೨೨ | ೫೩೬೩ | ೨೭೯೮ | ೩೩೯೦೫ |
| ೨. | ೧೦೨೨.೭೪ | ೧೧೯೯.೦೨ | ೩೪೪.೮೯ | ೫೮೨೭.೦೬ |

ಇ) ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟವನ್ನು ೧೯೫೫–೬೮ರ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

## ಗುಳೇದಗುಡ್ಡ ಭಾಗಕ್ಕೆ ಪ್ರತ್ಯೇಕ ಶಿಕ್ಷಣಾಧಿಕಾರಿ ವಲಯ ಸ್ಥಾಪಿಸುವ ಬಗ್ಗೆ

೯೮. ಶ್ರೀ ನಂಜಯ್ಯನಮಂಠ. (ಗುಳೇದಗುಡ್ಡ).—ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಳೇದಗುಡ್ಡ ಭಾಗಕ್ಕೆ ಪ್ರತ್ಯೇಕವಾದ ಶಿಕ್ಷಣಾಧಿಕಾರಿ ವಲಯವನ್ನು ಸ್ಥಾಪಿಸುವ ಯೋಜನೆ ಇದೆಯೇ ?

ಆ) ಹಾಗಿದ್ದಲ್ಲಿ ಅದನ್ನು ಎಂದಿನಿಂದ ಪ್ರಾರಂಭಿಸಲಾಗುವುದು ?

**ಶ್ರೀ ಬಿ. ಸೋಮಶೇಖರ್** (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

## ತೋಟಗಾರಿಕೆ ಫಾರಂನ್ನು ಪ್ರಾರಂಭಿಸುವ ಬಗ್ಗೆ

೧೦೧ ಶ್ರೀ ಎಸ್. ಜಿ. ನಂಜಯ್ಯನಮಠ (ಗುಳೇದಗುಡ್ಡ).— ಮಾನ್ಯ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿಜಾಪುರ ಜಿಲ್ಲೆಯಲ್ಲಿ ಹೊಸದಾಗಿ ತೋಟಗಾರಿಕೆ ಫಾರಂನ್ನು ಪ್ರಾರಂಭಿಸುವ ಯೋಜನೆ ಸರ್ಕಾರದಲ್ಲಿದೆಯೆ ?